ಅನುಬಂಧ

ವಿಧಾನ ಸಭಾ ಕ್ಷೇತ್ರದ ಹೆಸರು	ಭಾವಚಿತ್ರ ತೆಗೆಯಲಾದ ಒಟ್ಟು ಮತದಾರರ ಸಂಖ್ಯೆ
ಮಲ್ಲೇಶ್ವರಂ	99,047
ರಾಜಾಜಿನಗರ	1,60,934
ಗಾಂಧೀನಗರ	71,937
ಚಿಕ್ಕಪೇಟೆ	58,360
ಬಿನ್ನಿಪೇಟೆ	1,72,511
ಚಾಮರಾಜಪೇಟೆ	58,067
ಬಸವನಗುಡಿ	1,03,060
ಜಯನಗರ	1,26,658
ಶಾಂತಿನಗರ	91,227
ಶಿವಾಜಿನಗರ	53,824
ಭಾರತಿನಗರ	69,910
ಜಯಮಹಲ್	85,396

ಕರ್ನಾಟಕ ವಕ್ಫ್ ಮಂಡಳಿಯಿಂದ ಬೆಂಗಳೂರು ನಗರದಲ್ಲಿ ನೀಡಿರುವ ಹಣ

128 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್ ಕ್ಷೇತ್ರ) : ಮಾನ್ಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ಕರ್ನಾಟಕ ವಕ್ಫ್ ಮಂಡಳಿಯಿಂದ 95-96 ರಲ್ಲಿ ಬೆಂಗಳೂರಿನ ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ಮಸೀದಿಗಳ ದುರಸ್ತಿಗಾಗಿ ಹಾಗೂ ಹೊಲಿಗೆ ಯಂತ್ರಗಳನ್ನು ನೀಡುವುದಕ್ಕೆ ಎಷ್ಟು ಹಣವನ್ನು ವಿನಿಯೋಗಿಸಲು ಸರ್ಕಾರದವರು ಉದ್ದೇಶಿಸಿದ್ದಾರೆ?*

ಆ) *1995-96ರಲ್ಲಿ ಜಯಮಹಲ್ ವಿಧಾನ ಸಭಾ ಕ್ಷೇತ್ರಕ್ಕೆ ನಿಗದಿಪಡಿಸಿದ ಮೊತ್ತವೆಷ್ಟು ಹಾಗೂ 30-6-96ರ ವರೆವಿಗೆ ಬಿಡುಗಡೆ ಮಾಡಿರುವ ಹಣವೆಷ್ಟು?*

ಇ) *ಇಲ್ಲಿಯವರೆಗೆ ಜಯಮಹಲ್ ವಿಧಾನಸಭಾ ಕ್ಷೇತ್ರದಲ್ಲಿ ಬಿಡುಗಡೆ ಮಾಡಿರುವ ಹಣವೆಷ್ಟು?*

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಚಿವರು):

ಅ) 1995-96ನೇ ಆಯವ್ಯಯದಲ್ಲಿ ಸರ್ಕಾರವು ರಾಜ್ಯ ವಕ್ಫ್ ಸಂಸ್ಥೆಗಳ ಅಭಿವೃದ್ಧಿ ಜೀರ್ಣೋದ್ಧಾರಕ್ಕಾಗಿ ರೂ. 2.00 ಕೋಟಿ ಮತ್ತು ಕರ್ನಾಟಕ ವಕ್ಫ್

ಫೌಂಡೇಷನ್ ಫಾರ್ ಉಮನ್ ಡೆವಲಪ್‌ಮೆಂಟ್‌ಗೆ ರೂ. 1.00 ಕೋಟಿ ಮಂಜೂರು ಮಾಡಿದೆ. ಹಾಗೂ ರಾಜ್ಯದಲ್ಲಿ ಯಾವುದೇ ವಿಧಾನಸಭಾ ಕ್ಷೇತ್ರಕ್ಕೆ ನಿರ್ದಿಷ್ಟ ಹಣವನ್ನು ವಕ್ಫ್ ಸಂಸ್ಥೆಗಳಿಗೆ ಮೀಸಲಿಡಬೇಕೆಂಬ ನಿಯಮ ಇರುವುದಿಲ್ಲ.

ಆ) ಯಾವುದೇ ವಿಧಾನಸಭಾ ಕ್ಷೇತ್ರಕ್ಕೆ ನಿರ್ದಿಷ್ಟವಾದ ಹಣವನ್ನು ಮೀಸಲಿಡಬೇಕೆಂಬ ನಿಯಮ ಇರುವುದಿಲ್ಲ, ಮತ್ತು 30-6-95 ರವರೆಗೆ ಸರ್ಕಾರವು ಯಾವುದೇ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ.

ಇ) ಇಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 128ಕ್ಕೆ ಪೂರಕ ಟಿಪ್ಪಣಿ

1) 1995-96ರ ಆಯವ್ಯಯದಲ್ಲಿ ರೂ. 2.00 ಕೋಟಿಗಳನ್ನು ದುರಸ್ತಿ, ಜೀರ್ಣೋದ್ಧಾರ ಇತ್ಯಾದಿಗೆಂದು ರಾಜ್ಯದ ವಕ್ಫ್ ಸಂಸ್ಥೆಗಳಿಗೆ ಮಂಜೂರು ಮಾಡಲಾಗಿದೆ. ಜಿಲ್ಲೆಗಳಿಗೆ ಪ್ರತ್ಯೇಕವಾಗಿ ಹಣ ಹಂಚಿಕೆ ಆಗಿರುವುದಿಲ್ಲ.

2) 1995-96ರ ಅನುದಾನ ಇನ್ನೂ ಬಿಡುಗಡೆ ಆಗಿರುವುದಿಲ್ಲ.

3) ಆಲ್-ಅಹಮರ್ ವೆಲ್‌ಫೇರ್ ಟ್ರಸ್ಟ್, 4:1, 2ನೇ ಮುಖ್ಯರಸ್ತೆ, 1ನೇ ಬ್ಲಾಕ್, ಆರ್.ಟಿ.ನಗರ, ಬೆಂಗಳೂರು-32, ಇವರಿಗೆ ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ ಸಹಾಯಾನುದಾನವಾಗಿ ರೂ. 1.00 ಲಕ್ಷ ಮಂಜೂರು ಮಾಡಲಾಗಿದೆ. (ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ 62 ಡಬ್ಲ್ಯೂ ಜಿಎ 94 ದಿನಾಂಕ 30-3-93ರಲ್ಲಿ ರೂ. 70,000-00). ಸದರಿ ಸಹಾಯಾನುದಾನದ ಮೊತ್ತವನ್ನು ಎರಡು ಕಂತುಗಳಲ್ಲಿ ಬಿಡುಗಡೆ ಮಾಡಲಾಗಿದೆ.

ಮಾಜಿ ಸೈನಿಕರ ಕಲ್ಯಾಣಕ್ಕಾಗಿ ಹಣಕಾಸಿನ ಸಂಸ್ಥೆ ಸಾಪನೆ

133 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಕಾರಾಗೃಹ, ಗೃಹರಕ್ಷಕ ದಳ ನಾಗರೀಕ ರಕ್ಷಣೆ, ಮತ್ತು ಸೈನಿಕ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಒಟ್ಟು ಮಾಜಿ ಸೈನಿಕರ ಸಂಖ್ಯೆ ಎಷ್ಟು?

ಆ) ಮಾಜಿ ಸೈನಿಕರಿಗೆ ಸರಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು?

ಇ) ತಮಿಳುನಾಡಿನಲ್ಲಿ ಮಾಜಿ ಸೈನಿಕರಿಗಾಗಿ ಪ್ರತ್ಯೇಕ ಹಣಕಾಸಿನ ಸಂಸ್ಥೆಯನ್ನು ಸ್ಥಾಪಿಸಿರುವುದು ನಿಜವೇ?

ಈ) ರಾಜ್ಯದಲ್ಲೂ ಸಹ ಮಾಜಿ ಸೈನಿಕರಿಗಾಗಿ ಪ್ರತ್ಯೇಕ ಹಣಕಾಸು ನಿಗಮಸಂಸ್ಥೆ ಸ್ಥಾಪಿಸಲು ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಕಾರಾಗೃಹ, ಗೃಹ ರಕ್ಷಕ ದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಮಂತ್ರಿಗಳು) :

ಅ) 36,494

ಆ) ಅನುಬಂಧದಲ್ಲಿ ವಿವರಿಸಲಾಗಿದೆ.

ಇ) ತಮಿಳುನಾಡಿನಲ್ಲಿ ಪ್ರತ್ಯೇಕ ಮಾಜಿ ಸೈನಿಕರ ನಿಗಮ ಸ್ಥಾಪಿಸಲಾಗಿದೆ.

ಈ) ಸರ್ಕಾರದ ಪರಿಶೀಲನೆಯಲ್ಲಿದೆ.